# ಆದರ್ಶದ ವಾಸ್ತವಿಕತೆ

ರಾಮಮನೋಹರ ಲೋಹಿಯಾ ಮತ್ತು ಕಿಷನ್ ಪಟ್ನಾಯಕ್ ತರಹದ ವಿರೋಧ ಪಕ್ಷದಲ್ಲಿದ್ದ ಜನಪ್ರತಿನಿಧಿಗಳು 60ರ ದಶಕದ ಲೋಕಸಭೆಯಲ್ಲಿ ಆಗಿನ ಪ್ರಧಾನಮಂತ್ರಿ ಜವಹರಲಾಲ್ ನೆಹರೂ ಅವರ ಒಂದು ದಿನದ ವೆಚ್ಚವನ್ನು ಕುರಿತು ತೀವ್ರವಾಗಿ ತರಾಟೆಗೆ ತಗೆದುಕೊಂಡು ಅದನ್ನು ಸಾರ್ವಜನಿಕ ಚರ್ಚೆಯ ವಿಷಯವನ್ನಾಗಿಸಿದ್ದರು. ಅಂತಹ ನೈತಿಕತೆ ಮತ್ತು ದಿಟ್ಟತನ ಆಗಿನ ರಾಜಕಾರಣಿಗಳಲ್ಲಿತ್ತು. ಆ ಚರ್ಚೆ ಕೇವಲ ವೈಯಕ್ತಿಕ ಮಟ್ಟದ್ದಾಗಿರದೆ, ಸರ್ಕಾರದ ಬೊಕ್ಕಸದ ಬಗ್ಗೆ ಆಳುವವರು ಯಾವಾಗಲೂ ದೇಶಕ್ಕೆ ಉತ್ತರದಾಯಿಗಳಾಗಿರಬೇಕು ಎಂಬುದನ್ನು ಸೂಚಿಸುವಂತಿತ್ತು. 'ಕೃಷಿ ಅಥವಾ ಕೈಗಾರಿಕಾ ಕ್ಷೇತ್ರದಲ್ಲಿ ಬಂಡವಾಳವಾಗಿ ಹೂಡಿಕೆಯಾಗಬೇಕಾದ ಬೃಹತ್ ಪ್ರಮಾಣದ ರಾಷ್ಟ್ರೀಯ ಆದಾಯವು ದೇಶದ ಹಿಡಿಯಷ್ಟು ಉನ್ನತ ವರ್ಗದವರ ಮೋಜಿನ ಹಾಗೂ ವೈಭವದ ಜೀವನಕ್ಕೆ ವೆಚ್ಚವಾಗುತ್ತಿರುವ ಅಂಶದತ್ತ ಶ್ರೀಸಾಮಾನ್ಯರ ಗಮನ ಸೆಳೆಯುವ ಉದ್ದೇಶದಿಂದ' ನಾವು ಈ ಚರ್ಚೆಯನ್ನು ಆರಂಭಿಸಿದ್ದೇವೆ ಎಂದು ರಾಜನಾರಾಯಣ್ ಹೇಳಿದ್ದರು. ಈ ಚರ್ಚೆ ಅಂದಿಗೆ ಎಷ್ಟು ಮುಖ್ಯವಾಗಿತ್ತೊ ಇಂದಿಗೂ ಅದು ಹೆಚ್ಚು ಪ್ರಸ್ತುತವಾಗಿದೆ. ಇದಕ್ಕೆ ಇಂದಿನ ರಾಜಕಾರಣ ವ್ಯವಸ್ಥೆಯ ಬೇರುಗಳು ಹೆಚ್ಚು ಶಿಥಿಲಗೊಂಡಿರುವುದೇ ಕಾರಣ.

ನಮ್ಮ ಆಡಳಿತ ಯಂತ್ರದ ಭಾಗವಾಗಿರುವ ಸಚಿವರು ಎಷ್ಟು ಅಸೂಕ್ಷ್ಮವಾಗಿದ್ದಾರೆಂದರೆ, ಜನತೆಯ ಕಣ್ಣಿನಲ್ಲಿ ಸಾಮಾನ್ಯ ಎನಿಸುವ ಒಂದು ಯೋಜನೆಯ ಉದ್ಘಾಟನೆಯಂಥ ಸಾಮಾನ್ಯ ಕಾರ್ಯಕ್ರಮಕ್ಕೂ ಕೋಟ್ಯಂತರ ರೂಪಾಯಿಗಳನ್ನು ವಿವೇಚನೆಯಿಲ್ಲದೆ ನೀರಿನಂತೆ ವ್ಯಯ ಮಾಡುತ್ತಾರೆ. ತಮ್ಮ ಒಂದೆರಡು ಗಂಟೆಗಳ ಭೇಟಿಗಾಗಿ ಹತ್ತಾರು ಕೋಟಿ ಖರ್ಚುಮಾಡುವ ರಾಜಕೀಯ ಧುರೀಣರೂ ನಮ್ಮ ನಡುವೆ ಇದ್ದಾರೆ. ಯಾವ ರೀತಿಯಿಂದಲೂ ಜನತೆಯ ಹಿತಕ್ಕೆ ಒಗ್ಗದ 'ಕಾವೇರಿ ಆರತಿ' ಎಂಬ ವಿವೇಚನಾಹೀನ ಕಾರ್ಯಯೋಜನೆಗೆ 93 ಕೋಟಿ ವ್ಯಯಮಾಡಲು ಮುಂದಾಗಿರುವ ಉತ್ತರದಾಯಿತ್ವವಿಲ್ಲದ ರಾಜಕೀಯ ವ್ಯವಸ್ಥೆ ನಮ್ಮ ಕಣ್ಣ ಮುಂದಿದೆ. ಒಂದು ಸೇತುವೆ ಉದ್ಘಾಟನೆಗಾಗಿಯೊ ಅಥವಾ ಒಂದು ರಸ್ತೆ ಉದ್ಘಾಟನೆಗಾಗಿಯೊ ವೆಚ್ಚ ಮಾಡುತ್ತಿರುವ ಹಣವನ್ನು ನೋಡಿದಾಗ, ಸಾರ್ವಜನಿಕರು ಪಾವತಿಸುವ ತೆರಿಗೆಯ ಹಣವನ್ನು ಕೆಲವೇ ವ್ಯಕ್ತಿಗಳ ಒಣ ಡೌಲಿಗಾಗಿ ವ್ಯಯ ಮಾಡುವುದು ಎಷ್ಟರಮಟ್ಟಿಗೆ ಸರಿ ಎನಿಸುತ್ತದೆ. 'ಭಾರತದಲ್ಲಿ ಇರುವಷ್ಟು ಸುಳ್ಳು ಪ್ರಪಂಚದಲ್ಲಿ ಇನ್ನೆಲ್ಲೂ ಇಲ್ಲ. ಭಾರತ ಇಂದು ಸುಳ್ಳುಗಾರರು ಮತ್ತು ದಡ್ಡರ ದೇಶವಾಗಿದೆ... ಹುಚ್ಚು ಹುಚ್ಚಾಗಿ ವರ್ತಿಸುತ್ತಿರುವುದು ಸರ್ಕಾರವೇ ಹೊರತು ಜನರಲ್ಲ ಎಂಬುದು ನನ್ನ ನಿಲುವು' ಎಂದು ರಾಮಮನೋಹರ ಲೋಹಿಯಾ 60ರ ದಶಕದಲ್ಲೇ ಹೇಳಿದ್ದರು. ಇಂದಿಗೂ ಈ ಮಾತು ನಿಜವಲ್ಲವೆ!

80ರ ದಶಕದಲ್ಲಿ ಶಿವಮೊಗ್ಗ ಜಿಲ್ಲೆಯ ಮುಡುಬದಲ್ಲಿ ನಿರ್ಮಿಸಿದ್ದ ಒಂದು ಸೇತುವೆಯ ಉದ್ಘಾಟನೆಗಾಗಿ ಅಂದಿನ ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಬರಬೇಕಿತ್ತು. ಈ ಕಾರ್ಯಕ್ರಮಕ್ಕಾಗಿ ಲಕ್ಷಾಂತರ ಹಣ ಖರ್ಚಾಗುತ್ತಿತ್ತು. ಆಗ ರಾಜ್ಯದಲ್ಲಿ ರೈತ ಚಳವಳಿ ತೀವ್ರವಾಗಿತ್ತು. ಆ ಚಳವಳಿಯ ಮುಂಚೂಣಿಯಲ್ಲಿದ್ದ ಕಡಿದಾಳು ಶಾಮಣ್ಣನವರು ಈ ದುಂದುವೆಚ್ಚವನ್ನು ಮನಗಂಡು, ಇದನ್ನು ತಪ್ಪಿಸಲು ತಮ್ಮ ರೈತ ಕಾರ್ಯಕರ್ತರೊಂದಿಗೆ ಆ ಸೇತುವೆಯನ್ನು ಅಲ್ಲಿಯ ಅಂಬಿಗರ ಮೂಲಕ ಉದ್ಘಾಟಿಸಿದರು. ಅಂಬಿಗರಿಗೆಲ್ಲ ಕರಿ ಕಂಬಳಿ ಹೊದಿಸಿ ಸನ್ಮಾನಿಸಿದರು. ಈಗಲೂ ಆ ಸೇತುವೆ ಬಂದೋಬಸ್ತಾಗಿಯೇ ಇದೆ. ಇಂದಿನ ಜನಪ್ರತಿನಿಧಿಗಳು ಇಂತಹ ಉದಾತ್ತ ಚರಿತ್ರೆಯಿಂದ ಕಲಿಯಬೇಕಾದದ್ದು ಬಹಳಷ್ಟು ಇದೆ. ಆದರ್ಶಗಳು ಕುರೂಪವಾಗದೆ ವಾಸ್ತವವಾಗುವಂತೆ ಬದಲಿಸುವ ಇಚ್ಛಾಶಕ್ತಿ ಜನಪ್ರತಿನಿಧಿಗಳು ಮತ್ತು ಪ್ರಜ್ಞಾವಂತ ಜನತೆಯ ಮೇಲಿದೆ ಎಂಬುದನ್ನು ಈ ಘಟನೆ ತಿಳಿಸುತ್ತದೆ. ಆಡಂಬರ ಮತ್ತು ದೌಲತ್ತಿನ ನಡೆ ಯಾವುದೇ ಕ್ಷೇತ್ರದಲ್ಲಿ, ಹೇಗೆ ಪ್ರಕಟಗೊಂಡರೂ ಅದನ್ನು ವಿರೋಧಿಸಬೇಕಾದುದು ಮೊದಲ ಕರ್ತವ್ಯ.

ಈ ಒಣ ಡೌಲಿನ ದೌಲತ್ತು ಇಂದು ರಾಜಕಾರಣಕ್ಕೆ ಮಾತ್ರ ಮೀಸಲಾಗಿಲ್ಲ! ಸಾಹಿತ್ಯ ಸಮ್ಮೇಳನಗಳಂಥ ಸಾಂಸ್ಕೃತಿಕ ಚಟುವಟಿಕೆಗಳಿಗೂ ಈ ರೋಗ ಅಂಟಿದೆ. ಸಾಹಿತ್ಯ ಸಮ್ಮೇಳನವೊಂದರಲ್ಲಿ ಒಂದು ವೇದಿಕೆಯ ನಿರ್ಮಾಣಕ್ಕಾಗಿಯೇ 9 ಕೋಟಿ ಹಣ ಖರ್ಚಾಗಿದೆ ಎನ್ನುವ ಸಂಗತಿಯನ್ನು ಮಾಧ್ಯಮಗಳು ತೋರಿಸಿ ತೆರಿಗೆದಾರರನ್ನು ಬೆಚ್ಚಿಬೀಳಿಸಿವೆ! ಇಂತಹ ರೂಢಿಗತ ಸಮ್ಮೇಳನಗಳಿಗಿಂತ ಜನತೆಯ ಸಂಕಟ ಮತ್ತು ಸಾಹಿತ್ಯದ ಹೊಣೆಗಾರಿಕೆಗಳನ್ನು ವಸ್ತುನಿಷ್ಠವಾಗಿ ಚರ್ಚಿಸುವ 'ಮೇ ಸಾಹಿತ್ಯ ಸಮ್ಮೇಳನ'ದಂಥ ಸರಳ ಸಾಹಿತ್ಯ ಸಮ್ಮೇಳನವನ್ನು ಕೆಲವು ಸಂಘಟನೆಗಳು ನಡೆಸುತ್ತಿವೆ. ಸರ್ಕಾರದ ಮುಂದೆ ಕೈಯೊಡ್ಡದೆ ಅರ್ಥಪೂರ್ಣವಾಗಿ ಯೋಜಿಸುತ್ತಿರುವುದು ಹೆಚ್ಚು ಆಶಾದಾಯಕವಾಗಿದೆ. ಇಂತಹ ಸಮ್ಮೇಳನಗಳಿಗೆ ಜನತೆಯೇ ತಮ್ಮ ಹಣವನ್ನು ದೇಣಿಗೆ ನೀಡಿ, ತಮ್ಮ ಸ್ವಂತ ಖರ್ಚಿನಲ್ಲೇ ಸಮ್ಮೇಳನಕ್ಕೆ ಹೋಗಿಬರುತ್ತಾರೆ. 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ' ಎಂಬ ಕುವೆಂಪು ತೋರಿಸಿದ ಆದರ್ಶದ ತಳಹದಿಯ ಮೇಲೆ ಸಮ್ಮೇಳನ ನಡೆಯುತ್ತಿದೆ. ಜನಸಾಮಾನ್ಯರು, ಹೋರಾಟಗಾರರು, ಕುಶಲ ಕರ್ಮಿಗಳು, ಸಾಹಿತ್ಯಾಸಕ್ತರು, ಚಿಂತಕರು, ಲೇಖಕರು ಎಲ್ಲರಿಗೂ ಒಂದೇ ಬಗೆಯ ಆತಿಥ್ಯ. ಸಮ್ಮೇಳನ ಮುಗಿದ ಕೆಲವೇ ದಿನಗಳಲ್ಲಿ ಸಮ್ಮೇಳನಕ್ಕೆ ದೇಣಿಗೆ ನೀಡಿದವರ ಹೆಸರು ಮತ್ತು ಹಣ, ವೆಚ್ಚವಾದ ಹಣದ ಬಗ್ಗೆ ಸಾರ್ವಜನಿಕವಾಗಿ ಲೆಕ್ಕ ಒಪ್ಪಿಸುವುದು ಈ ಸಮ್ಮೇಳನದ ವಿಶೇಷ. ನಿಜವಾದ ಸಾಹಿತ್ಯ ಮತ್ತು ಸಮಾಜವನ್ನು ಕುರಿತ ಚರ್ಚೆಗಳು ನಡೆಯುವುದು ಇಂತಹ ಸರಳ ವೇದಿಕೆಗಳಲ್ಲೇ ಹೊರತು, 30–40 ಕೋಟಿ ದುಂದುಗಾರಿಕೆ ಮಾಡುವ ಸಾಹಿತ್ಯ ಸಮ್ಮೇಳನಗಳಲ್ಲಲ್ಲ ಎಂಬುದನ್ನು ಸಾಧಿಸಿ ತೋರಿಸಿವೆ.

ಒಂದು ಕ್ರಿಕೆಟ್ ತಂಡದ ವಿಜಯೋತ್ಸವದ ಆಚರಣೆಗಾಗಿ ಕೇವಲ ಒಂದು ಗಂಟೆ ನಡೆಯುವ ಕಾರ್ಯಕ್ರಮಕ್ಕಾಗಿ 15 ಕೋಟಿ ರೂಪಾಯಿ ಖರ್ಚಾಗಿದೆ ಎಂಬುದನ್ನು ಕೇಳಿದ್ದೇವೆ. ಸರ್ಕಾರದ ಕಣ್ಗಾವಲಿನಲ್ಲಿಯೇ ನಡೆಯುವ ಇಂತಹ ಘಟನೆಗಳು ಒಂದರ ಹಿಂದೆ ಒಂದರಂತೆ ಸಾಲುಗಟ್ಟಿ ಬರುತ್ತಿವೆ. ಜನಪ್ರತಿನಿಧಿಗಳು ತಮ್ಮನ್ನು ಜನತೆಯನ್ನು ಉದ್ಧರಿಸಲು ಬಂದಿರುವ ಒಳಿತಿನ ಧೂತ ಎಂದು ಭಾವಿಸುವುದನ್ನು ಮೊದಲು ನಿಲ್ಲಿಸಬೇಕು. ತನ್ನನ್ನು ಆಯ್ಕೆ ಮಾಡಿದ ಜನತೆಯ ಉಪ್ಪಿನ ಋಣ ನನ್ನ ಮೇಲಿದೆ ಎಂಬುದನ್ನು ಮನಗಂಡಾಗ ಮಾತ್ರ ತಾನು ನಿರ್ವಹಿಸಬೇಕಾದ ಕರ್ತವ್ಯದ ಅರಿವು ಅವರಲ್ಲಿ ಮೂಡಬಹುದು.

■ ಜಿ.ವಿ. ಆನಂದಮೂರ್ತಿ

## ಮಾತೇ ಮುತ್ತು

- ಮೋಡ ಇದೆ ಎಂದ ಮಾತ್ರಕ್ಕೆ ಆಕಾಶದಲ್ಲಿ ಸೂರ್ಯನಿಲ್ಲ ಎಂದು ಅರ್ಥವೇನು? ಮೋಡ ಹನಿಯೊಡೆದು ನೆಲಕ್ಕುದುರಿದರೆ, ಅಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಸೂರ್ಯನಿದ್ದಾನೆ.

  —ಫಿಡೆಲ್ ಕ್ಯಾಸ್ಟ್ರೊ
- ಯಾವ ಸಮಾಜ ಹೆಣ್ಣನ್ನು ಗೌರವಿಸುವುದಿಲ್ಲವೋ ಅದು ಬೇಗ ನಾಶವಾಗುತ್ತೆ.

  —ಸ್ವಾಮಿ ವಿವೇಕಾನಂದ
- ನಮ್ಮಲ್ಲಿಯೇ ಸಾಮರಸ್ಯವಿಲ್ಲದಿದ್ದರೆ ನಾವೊಂದು ರಾಷ್ಟ್ರವಾಗಿ ಬಾಳಲಾರೆವು. ಶಿಸ್ತಿಲ್ಲದ ರಾಜಕೀಯ ಸ್ವಾತಂತ್ರ್ಯ ಅಸ್ಥಿರವಾಗುತ್ತದೆ.

  —ಕುವೆಂಪು
- ಗರ್ವ ಮತ್ತು ಅಹಂ ಇವೆರಡು ಸತ್ಯವನ್ನು ಎಂದೂ ಸ್ವೀಕರಿಸುವುದಿಲ್ಲ.

  —ಗೌತಮ ಬುದ್ಧ
- ಉತ್ತಮರು ಆತ್ಮವಿಮರ್ಶೆ ಮಾಡಿಕೊಂಡು ತಮ್ಮನ್ನು ತಾವು ತಿದ್ದಿಕೊಳ್ಳುತ್ತಾರೆ.

  —ರಾಮಕೃಷ್ಣ ಪರಮಹಂಸ
- ಯಾರಿಗೂ ಉಪದೇಶ ಮಾಡಬೇಡಿ. ನೀವೇನು ಹೇಳಬೇಕಂತಿದ್ದೀರೋ ಹಾಗೆ ಬದುಕಿ ತೋರಿಸಿ.

  —ಶಿವರಾಮ ಕಾರಂತ
- ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು, ಇದೇ ಸುಖಿಯಾಗಿ ಇರುವುದರ ರಹಸ್ಯ.

  —ದ.ರಾ. ಬೇಂದ್ರೆ